SRI K. H. SRINIVAS.— You should have some sense of responsibility. You are answerable to this House. ಮಾನ್ಯ ಅಧ್ಯಕ್ಷರೇ ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಇವರು ಮಂಡಲ ಪಂಚಾಯಿತಿ ಪ್ರಧಾನ ಆದವರಿಗೆ ರಕ್ಷಣೆ ಮಾಡುವುದ ಕ್ಕೋಸ್ಕರ ತಮ್ಮ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಿದ್ದಾರೆ. ನೀವು ಈ ಸ್ಥಾನದಲ್ಲಿ ಇರುವುದಕ್ಕೆ ಅರ್ಹತೆ ಇಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಜೆ. ಎಚ್. ಪಟೇಲ್.— ಈ ಸದನಲ್ಲಿ ಮಾನ್ಯ ಸದಸ್ಯರುಗಳಿಗೆ ಚರ್ಚೆ ಮಾಡುವುದಕ್ಕೆ ಹಕ್ಕು ಇದೆ. ಏನು ಬೇಕಾದರೂ ಮಾಡಬಹುದು. ನಾನು ಮಾನ್ಯರು ಹೇಳಿದ್ದನ್ನು ಉಗ್ರವಾಗಿ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಏನು ಬೇಕಾದರೂ ಚಾರ್ಜಸ್ ಮಾಡಬಹುದು, ಆದರೆ ಹಾಗೆ ಮಾಡಿದ ಚಾರ್ಜಸ್‌ಗಳಲ್ಲಿ, ನಾಲಾಯಂಕ್ ಯಾರು ಎಂಬುದನ್ನು ಜನರು ಡಿಸೈಡ್ ಮಾಡುತ್ತಾರೆ. ಆದರೆ ಯಾರೂ ಇಂತಹ ಭಾಷೆಯನ್ನು ಉಪಯೋಗಿಸುವುದು ಬೇಡ ಎಂದು ನನ್ನ ವಿನಂತಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ಆ ಬಗ್ಗೆ ಒಂದು ಸದನದ ಸಮಿತಿಯನ್ನು ನೇಮಿಸಿ. ಅವರಂ ಸ್ಥಳಕ್ಕೆ ಭೇಟಿ ನೀಡಿ ವಿಚಾರವನ್ನು ತಿಳಿದುಕೊಂಡು ಬರಲಿ.

ಅಧ್ಯಕ್ಷರು.— ಮಾನ್ಯ ಶ್ರೀನಿವಾಸ್‌ರವರೇ, ದಯವಿಟ್ಟು ನೀವು ಕುಳಿತುಕೊಳ್ಳಿ ಬೇಕಂ. ಮಾನ್ಯ ಕೆ. ಹೆಚ್ ಪಾಟೀಲ್‌ರವರಂ ತಮ್ಮ ಸೂಚನೆಯಂನ್ನು ಕೇಳಿ...

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರಿ ಒಂದು ಸದನದ ಸಮಿತಿಯನ್ನು ನೇಮಕ ಮಾಡಿ ಸ್ಥಳಕ್ಕೆ ಕಳುಹಿಸಿಕೊಡಿ. ನಾನು ಚಾರ್ಜಸ್ ಪ್ರೂವ್ ಮಾಡದೇ ಹೋದರೆ ಎಂ. ಎಲ್. ಎ. ಸ್ಥಾನಕ್ಕೆ ರಿಸೈನ್ ಮಾಡುತ್ತೇನೆ ಎಂದು ಹೇಳುತ್ತಾರೆ...

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.— ಎಲ್ಲರೂ ಬುದ್ಧಿವಂತರು, ಎಲ್ಲರೂ ಅಡ್ವೋಕೇಟ್ಸ್...

ಅಧ್ಯಕ್ಷರು — ದಯವಾಡಿ ಎಲ್ಲರೂ ಕುಳಿತುಕೊಳ್ಳಿ. ಕೆ. ಹೆಚ್. ಪಾಟೀಲ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಹೇಳಿ, ಮಾನ್ಯ ಸಹಕಾರ ಸಚಿವರು ತಮ್ಮ ಹೇಳಿಕೆಯನ್ನು ಕೊಡಿ.

ಗಮನ ಸೆಳೆಯುವ ಸೂಚನೆ

ಗದಗ ಜಿಲ್ಲೆಯಂ ಹೊಂಬಾಳಿಯೆಂಲ್ಲಿ ಗದಗ ಸಹಕಾರ ಹತ್ತಿ ಮಾರಾಟ ಸಂಘದ ಶಾಖೆಯನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಕೆ. ಹೆಚ್. ಪಾಟೀಲ್.— ಗದಗ್ ಜಿಲ್ಲೆಯ ಹೊಂಬಾಳೆ ತಾಲ್ಲೂಕಿನಲ್ಲಿ ಗದಗ್ ಸಹಕಾರ ಹತ್ತಿ ಮಾರಾಟ ಸಂಘದ ಶಾಖೆಯನ್ನು ಪ್ರಾರಂಭಿಸುವ ಬಗ್ಗೆ ಸಹಕಾರ ಮಂತ್ರಿಯವರ ಗಮನವನ್ನು ಸೆಳೆಯಂತ್ತೇನೆ.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).— ೧೯೮೬—೮೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಬೇಳೆ ಕಾಳುಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ (ಎನ್.ಡಿ.ಡಿ.ಪಿ) ಸಹಕಾರ ಕ್ಷೇತ್ರದಲ್ಲಿ ಬೇಳೆ ಗಿರಣಿಗಳನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಈ ಕೆಳಕಂಡ ಮಾದರಿಯಲ್ಲಿ ಧನ ಸಹಾಯವನ್ನು ನಿರೂಪಿಸಲಾಗಿತ್ತು.—

ಯೋಜನೆಯ ವೆಚ್ಚದಲ್ಲಿ ಶೇಕಡ ೬೫ ಭಾಗ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದಿಂದ ಸಾಲದ ರೂಪವಾಗಿಯೂ, ಶೇಕಡ ೨೬ ಭಾಗ ಸಬ್ಸಿಡಿ ರೂಪದಲ್ಲಿಯೂ, ರಾಜ್ಯದ ಕೃಷಿ ಇಲಾಖೆಯ ಪಂಖಾಂತರ (ಅದರಲ್ಲಿ ಅರ್ಧ ಭಾಗ ರಾಜ್ಯ ಸರ್ಕಾರದಿಂದಲೂ, ಉಳಿದರ್ಧ ಭಾಗ ಕೇಂದ್ರ ಸರ್ಕಾರ ದಿಂದಲೂ ಕೂಡಿಸಿ) ಹಾಗೂ ಶೇಕಡ ೯ ಭಾಗ ಸಂಘದ ವತಿಯಿಂದಲೂ ಭರಿಸುವಂತೆ ನಿರೂಪಿಸ ಲಾಗಿತ್ತು.

ಈ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಕೃಷಿ ಇಲಾಖೆಯು ಜಾರಿಗೆ ತರಲು ಒಪ್ಪಿಸಲಾಗಿತ್ತು. ರಾಜ್ಯ ಮಟ್ಟದಲ್ಲಿ ಅಂತರ್ ಇಲಾಖೆ ಸಮಿತಿಯೊಂದನ್ನು ರಚಿಸಲಾಗಿದ್ದು, ಸಹಕಾರ ಇಲಾಖೆಯನ್ನು ನೋಡಲ್ ಇಲಾಖೆಯೆಂದು ಸೂಚಿಸಿ, ಸದರಿ ಯೋಜನೆಯಡಿಯಲ್ಲಿ ನವಲ್ಕು ಸಹಕಾರ ಬೇಳೆ ಗಿರಣಿಗಳನ್ನು ಕರ್ನಾಟಕದಲ್ಲಿ ಸ್ಥಾಪನೆ ಮಾಡಲು ಉದ್ದೇಶಿಸಲಾಯಿತು. ಆದ್ದರಿಂದ ಸದರಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಹಕಾರ ಹಾಗೂ ಕೃಷಿ ಇಲಾಖೆಗಳೆರಡೂ ಕೂಡಿದ ಯೋಜನೆಯನ್ನಾಗಿ ಪರಿಗಣಿಸಲಾಯಿತು. ಕೃಷಿ ಇಲಾಖೆಯು ೧೯೮೬—೮೭ನೇ ಸಾಲಿನ ಆಯವ್ಯಯದಲ್ಲಿ ರೂ. ೧೩.೬೦ ಲಕ್ಷಗಳನ್ನು ಸಹಾಯಧನವಾಗಿ ನೀಡಲು ಸೂಚಿಸಲಾಗಿತ್ತು.

ಗದಗ ಸಹಕಾರ ಹತ್ತಿ ಮಾರಾಟ ಸಂಘ ನಿಯಮಿತವು, ಗದಗ ತಾಲ್ಲೂಕಿನ ಹೊಂಬಳ ಗ್ರಾಮದಲ್ಲಿ ಬೇಳೆ ಗಿರಣಿಯೊಂದನ್ನು ಮೇಲ್ಕಂಡ ಯೋಜನೆಯಡಿಯಲ್ಲಿ ಸ್ಥಾಪಿಸುವ ಸಲುವಾಗಿ ೨೮.೫೦ ಲಕ್ಷ ರೂಪಾಯಿಗಳ ಅಂದಾಜಿನ್ನೊಳಗೊಂಡ ಪ್ರಸ್ತಾವನೆಯನ್ನೂ ಮತ್ತು ಬಿಜಾಪುರ ಟಿಎಪಿಸಿಎಂಎಸ್ ನವರು ಬಿಜಾಪುರದಲ್ಲಿ ಬೇಳೆ ಗಿರಣಿಯನ್ನು ಸ್ಥಾಪಿಸಲು ಸಲ್ಲಿಸಿದ್ದ ಪ್ರಸ್ತಾವನೆಯೊಂದಿಗೆ ಸರ್ಕಾರದ ಪತ್ರ ಸಂಖ್ಯೆ. ಸಿ.ಎಂ.ಡಬ್ಲ್ಯೂ ೨೧೯ ಸಿ.ಇ.ಪಿ ೮೬ ದಿನಾಂಕ ೧೯/೨೮-೩-೧೯೮೭ ಕೇಂದ್ರ ಸಹಕಾರ ಅಭಿವೃದ್ಧಿ ನಿಗಮದವರ ಅನುಮೋದನೆಗಾಗಿ ಶಿಫಾರಸ್ಸುವ ಮಾಡಲಾಯಿತು.

ಸದರಿ ನಿಗಮವು ಅವರ ಪತ್ರ ಸಂಖ್ಯೆ ಎನ್.ಸಿ.ಡಿ.ಸಿ ೧೪೪/೮೭ ಎ ಫ್.ಜಿ ೬೫ ದಿನಾಂಕ ೨೯-೭-೧೯೮೭ ರಲ್ಲಿ ಮೇಲ್ಕಂಡ ಪ್ರಸ್ತಾಪನೆಗೆ ಅನುಮೋದನೆ ನೀಡುತ್ತಾ, ಈ ಕೆಳಗೆ ಸೂಚಿಸಿದ ರೀತಿಯಲ್ಲಿ ೨೮.೫ ಲಕ್ಷರೂ.ಗಳಿಗೆ ಧನಸಹಾಯದ ರೀತಿಯನ್ನು ಸಹಾ ಸೂಚಿಸಿರುತ್ತದೆ.

	ರೂ.ಗಳಲ್ಲಿ
ಶೇಕಡ ೬೫ ಭಾಗ ಎನ್‌ಸಿಡಿಸಿ ಯವರಿಂದ ಸಾಲದ ರೂಪದಲ್ಲಿ	೧೮,೫೨,೫೦೦-೦೦
ಶೇಕಡ ೨೬ ಭಾಗ ರಾಜ್ಯ ಸರ್ಕಾರದಿಂದ ಸಬ್ಸಿಡಿ ರೂಪದಲ್ಲಿ	೭,೪೧,೦೦೦-೦೦
	೨೫,೯೩,೫೦೦-೦೦
ಶೇಕಡ ೯ ಭಾಗ ಸಂಘದ ವತಿಯಿಂದ	೨,೫೬,೫೦೦-೦೦
ಒಟ್ಟು ಮೊತ್ತ	೨೮,೫೦,೦೦೦-೦೦

ಪ್ರಸಕ್ತ ವರ್ಷದಿಂದ ಅಂದರೆ ೧೯೮೭-೮೮ನೇ ಸಾಲಿನಿಂದ ಕೇಂದ್ರ ಸರ್ಕಾರವು ಸಹಾಯಧನ ನೀಡಿಕೆಯನ್ನು ಕೈಬಿಟ್ಟಿರುವುದರಿಂದ ಕೇಂದ್ರ ಸಹಕಾರ ಅಭಿವೃದ್ಧಿ ನಿಗಮವು ಮೇಲ್ಕಂಡ ಪ್ರಸ್ತಾಪನೆಗೆ ಅನುಮೋದನೆಯನ್ನು ನೀಡುವಾಗ, ಸಹಾಯಧನವನ್ನು ಪೂರ್ತಿಯಾಗಿ ರಾಜ್ಯ ಸರ್ಕಾರವೇ ಭರಿಸಬೇಕೆಂದು ಸೂಚನೆಯನ್ನು ನೀಡಿರುತ್ತದೆ.

ಕರ್ನಾಟಕ ಸರ್ಕಾರದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯು ಸರ್ಕಾರಿ ಆದೇಶ ಸಂಖ್ಯೆ. ಎ. ಹೆಚ್. ಡಿ ೮೧ ಎನ್. ಎಂ. ಎಸ್. ೮೭ ದಿನಾಂಕ ೨೮-೩-೧೯೮೭ ರಲ್ಲಿ ಸಹಕಾರ ಸಂಘಗಳ ನಿಬಂಧಕರಿಗೆ ರೂ. ೧೩.೬೦ ಲಕ್ಷ ಕೇಂದ್ರ ಬೇಳೆ ಅಭಿವೃದ್ಧಿ ಯೋಜನೆಯ ಸಹಾಯಧನವನ್ನು ಕೃಷಿ ಇಲಾಖೆಯ ಆಯವ್ಯಯದಿಂದ ಪಡೆದು ಸಹಕಾರ ಸಂಘಗಳ ಪಿ. ಡಿ. ಅಕೌಂಟಿನಲ್ಲಿ ಸದರಿ ಮೊತ್ತವನ್ನು ಇಟ್ಟು, ಅದನ್ನು ಆ ನಂತರ ಪ್ರಯೋಜನ ಪಡೆಯುವ ಸಹಕಾರ ಸಂಘಗಳಿಗೆ ಬಿಡುಗಡೆ ಮಾಡಲು ಅನುಮತಿ ನೀಡಿತು.

ಸರ್ಕಾರದ ಮಟ್ಟದಲ್ಲಿ ಕೃಷಿ ಮತ್ತು ಸಹಕಾರ ಇಲಾಖೆಗಳೆರಡೂ ಸಮಾಲೋಚನೆ ನಡೆಸಿ, ಮೇಲ್ಕಂಡ ೧೩.೬ ಲಕ್ಷ ರೂ.ಗಳನ್ನು ಈಗಾಗಲೇ ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಬೇಳೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾತಿ ಮಾಡಲಾಗಿರುವ ಸಹಾಯ ಧನವನ್ನು ಸಂಘಕ್ಕೆ ಬಿಡುಗಡೆ ಮಾಡಬೇಕೆಂತಲೂ, ಹಾಗೂ ಸಾಲ ಮಂಜೂರಾತಿಗಾಗಿ ಮಂಡಿನ ಕ್ರಮ ತೆಗೆದುಕೊಳ್ಳಲು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಕೋರಲಾಯಿತು.

ಇದರನ್ವಯ ಸಹಕಾರ ಸಂಘಗಳ ನಿಬಂಧಕರು ಸಂಘಕ್ಕೆ ದಿನಾಂಕ ೧೪-೧೨-೧೯೮೭ ರಂದು ಪತ್ರವೊಂದನ್ನು ಬರೆದು, ಹಣ ಬಿಡುಗಡೆ ಮಾಡಲು ಕೋರಿ ಪ್ರಸ್ತಾಪನೆಯೊಂದನ್ನು ಕಳುಹಿಸಲು ಕೋರಿದರು. ಅಂತೆಯೇ ಸಹಾಯ ಧನದ ಬಿಡುಗಡೆ ಬಗ್ಗೆ ವಿಧಿಸಲ್ಪಟ್ಟ ಪರತ್ತು ಮತ್ತು ನಿಯಮಗಳನ್ನು ಕಳುಹಿಸಲು ಕೃಷಿ ಇಲಾಖೆಯ ನಿರ್ದೇಶಕರನ್ನೂ ಸಹಾ ಸಹಾಯ ಧನವನ್ನು ಬಿಡುಗಡೆ ಮಾಡಲು ಸರ್ಕಾರದ ಅನುಮೋದನೆ ಪಡೆಯುವ ಸಲುವಾಗಿ ಕೋರಿದರು. ಸದರಿ ಸಂಘದ ಸಲಹೆಗಾರರಾದ (ಮಾನ್ಯ ಶ್ರೀ ಕೆ. ಹೆಚ್. ಪಾಟೀಲರು) ಅವರ ಪತ್ರ ದಿನಾಂಕ ೧೪-೧೨-೧೯೮೭ ರೊಂದಿಗೆ ಹಣ ಬಿಡುಗಡೆಯ ಬಗ್ಗೆ ಕೋರಿ ಸಂಘದ ತಾರೀಖು ೧೨-೧೨-೧೯೮೭ರ ಪ್ರಸ್ತಾಪನೆಯನ್ನು ಬೆಳಗಾವಿಯ ಸಂಯುಕ್ತ ನಿಬಂಧಕರಿಗೆ ಕಳುಹಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ನಿಬಂಧಕರಿಗೆ ದಿನಾಂಕ ೨೬-೧೨-೧೯೮೭ ರಂದು ಬೆಳಗಾವಿಯ ಸಂಯುಕ್ತ ನಿಬಂಧಕರು, ಹಣ ಬಿಡುಗಡೆ ಮಾಡಲು ಸಲ್ಲಿಸಿರುತ್ತಾರೆ.

ಶೇಕಡ ೨೫ ರಷ್ಟು ಸಾಲಧನ ನೀಡಿಕೆಯನ್ನು ಕುರಿತು ೪,೬೩,೦೦೦-೦೦ ರೂ.ಗಳನ್ನೊಳಗೊಂಡ ಪ್ರಸ್ತಾವನೆಯೂ ಸಹಾ ಸರ್ಕಾರಕ್ಕೆ ನಿಬಂಧಕರಿಂದ ಬಂದಿದ್ದು ಅದೂ ಸಹಾ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಪಿ, ಡಿ. ಅಕೌಂಟಿನಿಂದ ಧನಸಹಾಯ ಮಾಡುವ ಕುರಿತು ಸಹಕಾರ ಸಂಘಗಳ ನಿಬಂಧಕರು ಕೃಷಿ ಇಲಾಖೆಯ ನಿರ್ದೇಶಕರಿಗೆ ಬರೆದಿರುವ ಪತ್ರಕ್ಕೆ ಅವರು ದಿನಾಂಕ ೮-೧-೧೯೪೮ರಂದು ಉತ್ತರಿಸಿ, ಜಾರಿಯಲ್ಲಿರುವ ನಿಯಮಾವಳಿಯ ಪ್ರಕಾರ ಸಹಾಯಧನ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ. ಹಾಗೆಯೇ ದಿನಾಂಕ ೧೧-೧-೧೯೪೮ರಂದು ನಿರ್ದೇಶಕರು ಮಾನ್ಯ ಶ್ರೀ ಕೆ ಹೆಚ್. ಪಾಟೀಲ್‌ರವರಿಗೆ ಅರೆ ಸರ್ಕಾರಿ ಪತ್ರವೊಂದನ್ನು ಬರೆದು ಇಲಾಖೆಯು ಹಣ ಬಿಡುಗಡೆ ಮಾಡುವ ಮುನ್ನ ಕೆಲವು ಪರತ್ತು ಮತ್ತು ನಿಯಮಗಳನ್ನು ಸೂಚಿಸಬೇಕಾಗುತ್ತದೆಂತಲೂ ತಿಳಿಸಿರುತ್ತಾರೆ.

ಆದಂದರಿಂದ ಯಾವುದೇ ರೀತಿಯಿಂದಲೂ ತಡವಾಗಿದ್ದಲ್ಲಿ ಅದು ರಾಷ್ಟ್ರೀಯ ಬೇಳೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರಾತಿ ನೀಡುವ ವಿಧಾನದಲ್ಲಿ ಆದ ಬದಲಾವಣೆಯಿಂದಾಗಿಯೇ ಆಗಿರುತ್ತದೆಂದು ಮನಗಾಣಬಹುದು.

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲಿಯವರೆಗೂ ಸರಕಾರದವರು ಹಣವನ್ನು ಬಿಡುಗಡೆ ಮಾಡಿಲ್ಲ ಪತ್ರ ಬರೆದಿದ್ದೀರಿ ಅಷ್ಟೇ. ೧೯೮೮ನೇ ಇಸವಿಯೊಳಗೆ ಇದು ಆಗಬೇಕೆಂದು ಎನ್.ಸಿ.ಡಿ.ಸಿ.ಯವರು ಹೇಳುತ್ತಿದ್ದಾರೆ. ಇನ್ನೂ ಅಕ್ವಿಸಿಷನ್ ಪ್ರಕರಣ ಮುಗಿಸಿಲ್ಲ ಇದು ಕಂದಾಯ ಮಂತ್ರಿಗಳಿಗೆ ಸಂಬಂಧಿಸಿದ್ದುದು. ಇದಲ್ಲಾ ಆಗದ ಹೊರತು ಹೊಲವನ್ನು ಖರೀದಿ ಮಾಡಲಿಕ್ಕೆ ಬರುವುದಿಲ್ಲ. ಇದು ಕೈಗಾಂಕೆ ಆಗಬೇಕೆನ್ನುವ ದೃಷ್ಟಿಯಿಂದ ಮುಖ್ಯಮಂತ್ರಿ ವಹಿಸಿ ಆದಷ್ಟು ಬೇಗ ಲ್ಯಾಂಡ್ ಅಕ್ವಿಜರ್ ಮಾಡಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮನ್ನು ವಿನಂತಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥಯ್ಯ.—ಸಾಧ್ಯವಾದಷ್ಟು ಬೇಗ ಹಣವನ್ನು ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

(3) ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನಿಲ್ಲಿಸಿರುವ ಬಗ್ಗೆ

ಶ್ರೀ ಜಿ. ರಾಜೂಗೌಡ —ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯವರೆಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲಿಸಿರುವುದರಿಂದ ರಾಜ್ಯದ ರೈತರು ಗಳಿಗೆ ವ್ಯವಸಾಯ ಮಾಡಲು ತೊಂದರೆಯಾಗುತ್ತಿರುವ ವಿಷಯದ ಬಗ್ಗೆ ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ನನ್ನ ಉತ್ತರ ಈ ರೀತಿ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಬೆಳಿಗಿನ ೬ ಘಂಟೆಯಿಂದ ಮಧ್ಯಾಹ್ನ ೨ ಘಂಟೆವರೆಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲಿಸಿರುವುದರಿಂದ ರಾಜ್ಯದ ರೈತರು ನೀರಾವರಿ ಭೂಮಿಯಿಂದ ವಿದ್ಯುಚ್ಛಕ್ತಿ ಮೋಟಾರುಗಳ